

ಕೃಷಿ





# ಬಹುಮಹಡಿ ತೋಟ!

**ಉತ್ತರಪ್ರದೇಶದ ರಾಮ್‌ಸಿಂಗ್‌ರ 'ಬಹುಮಹಡಿ ತೋಟ' ಕಣ್ಣುಗಳಿಗೆ ತಂಪು, ಮನಸ್ಸಿಗೆ ಹಿತ ಮಾತ್ರವಲ್ಲ, ಆದಾಯದ ಮೂಲವೂ ಹೌದು.**

**■ ರೂಪಾ ಕೆ.ಎಂ.**

ಪುಟ್ಟ ಕೋಣೆ ಇದ್ದರೂ ಅದನ್ನು ಬಾಡಿಗೆಗೆ ಬಿಟ್ಟು, ಅದನ್ನೇ ಆದಾಯ ಮಾಡಿಕೊಳ್ಳುವ 'ಬದುಕುವ ಕಲೆ' ಬಲ್ಲ ಜಾಣರೇ ಹೆಚ್ಚು. ಆದರೆ, ಉತ್ತರ ಪ್ರದೇಶದ ಬರೇಲಿಯ ರಾಮ್‌ವೀರ್ ಸಿಂಗ್ ಅವರ ದಾರಿ ಭಿನ್ನವಾದುದು. ಅವರು ತಮ್ಮ ಮೂರಂತಸ್ತಿನ ಕಟ್ಟಡದ ಖಾಲಿ ಸ್ಥಳಗಳಲ್ಲಿ 10 ಸಾವಿರಕ್ಕೂ ಹೆಚ್ಚು ಗಿಡಗಳನ್ನು ಬೆಳೆದಿದ್ದಾರೆ.

ಮಣ್ಣಿನ ಹಂಗಿಲ್ಲದೆ 'ಹೈಡ್ರೊಪೋನಿಕ್ಸ್' ಪದ್ಧತಿಯ ಮೂಲಕ ಬಗೆ ಬಗೆಯ ತರಕಾರಿ, ಹಣ್ಣುಗಳನ್ನು ರಾಮ್‌ವೀರ್ ಸಿಂಗ್ ಬೆಳೆದಿದ್ದಾರೆ. ಕಟ್ಟಡದ ಬಾಲ್ಕನಿ ಹಾಗೂ ಖಾಲಿ ಸ್ಥಳಗಳಲ್ಲಿ ಪಿವಿಸಿ ಪೈಪ್‌ಗಳನ್ನು ಅಳವಡಿಸಿದ್ದಾರೆ. ಅದರಲ್ಲಿಯೇ ಇಳುವರಿ ತೆಗೆದಿದ್ದಾರೆ. ಗುರುತ್ವಾಕರ್ಷಣೆಯ ಆಧಾರದಲ್ಲಿ ಈ ಪೈಪುಗಳ ಮೂಲಕ ಸರಾಗವಾಗಿ ಹರಿಯುವ ನೀರು, ಸಸ್ಯಗಳ ಬೆಳವಣಿಗೆಗೆ ಅಗತ್ಯವಿರುವ ಮೆಗ್ನೀಷಿಯಂ, ಫಾಸ್ಪರಸ್, ಜಿಂಕ್, ಸತು, ನೈಟ್ರೋಜನ್ ಸೇರಿದಂತೆ ಸುಮಾರು 16 ಬಗೆಯ ಪೋಷಕಾಂಶಗಳನ್ನು ಹೊತ್ತು ತರುತ್ತದೆ. ರಾಮ್‌ವೀರ್ ಅವರ ಈ ಹಸಿರುಕೃಷಿ ಕ್ರಿಮಿನಾಶಕ ಬಳಕೆಯಿಂದ ದೂರ.

ನಾನಾ ಬಗೆಯ ತರಕಾರಿ, ಹಣ್ಣುಗಳನ್ನು ಬೆಳೆಯುವ ರಾಮ್‌ವೀರ್ ಸಿಂಗ್, ಖಾಲಿ ಸ್ಥಳ ಇರುವವರು 'ಹೈಡ್ರೊಪೋನಿಕ್ಸ್' ಪದ್ಧತಿಯಲ್ಲಿ ಗಿಡಗಳನ್ನು ಬೆಳೆದು ಆದಾಯ ಗಳಿಸಬಹುದು ಎಂದು ಸಲಹೆ ನೀಡುತ್ತಿದ್ದಾರೆ. ಆಸಕ್ತರಿಗೆ 'ಹೈಡ್ರೊಪೋನಿಕ್ಸ್' ಪದ್ಧತಿಯ ಅಳವಡಿಕೆಗೆ ಸಹಾಯ ಮಾಡುತ್ತಿದ್ದಾರೆ. 'ವಿಂಪಾ ಆರ್ಗ್ಯಾನಿಕ್ ಆ್ಯಂಡ್ ಹೈಡ್ರೊಪೋನಿಕ್ಸ್' ಎಂಬ ತಮ್ಮದೇ ಕಂಪನಿಯೊಂದನ್ನು ತೆರೆದಿದ್ದಾರೆ. ಅಂದಹಾಗೆ, ತರಕಾರಿ–ಹಣ್ಣು ಹಾಗೂ ವಿವಿಧ ಬಗೆಯ ಔಷಧೀಯ ಸಸ್ಯಗಳಿಂದಲೇ ರಾಮ್‌ಸಿಂಗ್ ಪ್ರತಿ ತಿಂಗಳು ಉತ್ತಮ ಆದಾಯ ಗಳಿಸುತ್ತಿದ್ದಾರಂತೆ.

ಪತ್ರಕರ್ತನಾಗಿ ಬದುಕು ಕಟ್ಟಿಕೊಂಡಿದ್ದ ಅವರಲ್ಲಿ ಕೃಷಿಕನಾಗಬೇಕೆಂಬ ಆಸಕ್ತಿ ಮೊಳೆತದ್ದು ಮಾತ್ರ ವಿಶಿಷ್ಟ ಕಾರಣಕ್ಕೆ. 2009ರಲ್ಲಿ ಅವರ ಆಪ್ತ ಗೆಳೆಯನ ತಂದೆ ಕ್ಯಾನ್ಸರ್ ಬಾಧೆಗೊಳಗಾಗಿದ್ದರು. ರಾಸಾಯನಿಕಯುಕ್ತ ತರಕಾರಿ ಹಾಗೂ ಹಣ್ಣಿನ ಸೇವನೆಯಿಂದಲೇ ಕ್ಯಾನ್ಸರ್ ಉಂಟಾಗಿರಬಹುದು ಎಂದು ವೈದ್ಯರು ತಿಳಿಸಿದ್ದರು. ಈ ವಿಷಯ ಕೇಳಿದ ಮೇಲೆ ರಾಮ್‌ವೀರ್ ಸಿಂಗ್‌ಗೆ ತರಕಾರಿ, ಹಣ್ಣು ಎಂದರೆ ಆತಂಕ ಶುರುವಾಯಿತು.

ಹೊರಗಿನಿಂದ ತರಕಾರಿ, ಹಣ್ಣು ಖರೀದಿಸಿ ತಂದಾಗ ಎರಡೆರಡು ಬಾರಿ ಪರಿಶೀಲಿಸಿ, ಅಳೆದು ತೂಗಿ ಬಳಸಲು ಶುರುಮಾಡಿದರು. ಕೊನೆಗೆ, ತಮ್ಮ ಕುಟುಂಬಕ್ಕೆ ಬೇಕಾದುದನ್ನು ತಾವೇ ಬೆಳೆದುಕೊಳ್ಳಲು ಸಹಜ ಕೃಷಿ ಪದ್ಧತಿಯನ್ನೇ ಪೂರ್ಣಾವಧಿ ಉದ್ಯೋಗವಾಗಿಸಿಕೊಂಡರು. ಇದಕ್ಕಾಗಿ ತಾವು ವಾಸವಿದ್ದ ಮನೆಯಿಂದ 40 ಕಿ.ಮೀ. ದೂರದಲ್ಲಿದ್ದ ಹಿರೀಕರ ಜಮೀನಿನಲ್ಲಿ ಸಹಜ ಕೃಷಿ ಮಾಡಲು ಆರಂಭಿಸಿದರು. ಸಹಜ ರೀತಿಯಲ್ಲಿಯೇ ಹಣ್ಣು, ತರಕಾರಿಗಳನ್ನು ಬೆಳೆಯಲು ಆರಂಭಿಸಿದರು.

2018ರಲ್ಲಿ ದುಬೈನಲ್ಲಿ ನಡೆದ ಹೈಡ್ರೊಪೋನಿಕ್ಸ್ ಪದ್ಧತಿಯ ಮೂಲಕ ಕೃಷಿ ಮಾಡುವ ಕಾರ್ಯಾಗಾರದಲ್ಲಿ ಭಾಗವಹಿಸಿದ್ದರು. ಇದು ಅವರಲ್ಲಿ ಪ್ರೇರಣೆ ನೀಡಿತು. ತಮ್ಮ ಮೂರಂತಸ್ತಿನ ಕಟ್ಟಡದಲ್ಲಿ ಇಳುವರಿ ತೆಗೆಯುವುದರ ಜೊತೆಗೆ, ಜಮೀನಿನಲ್ಲಿಯೂ ಸಾವಯವ ರೀತಿಯಲ್ಲಿ ಕೃಷಿ ಮಾಡುತ್ತಿದ್ದಾರೆ. ಮೀನುಗಾರಿಕೆಯನ್ನು ಉಪಕಸುಬಾಗಿ ರೂಢಿಸಿಕೊಂಡಿದ್ದಾರೆ.

ರಾಮ್‌ಸಿಂಗ್ ಅವರ ಕೃಷಿ ಪದ್ಧತಿಯಲ್ಲಿ ನಮ್ಮೆಲ್ಲರಿಗೂ ಒಂದು ಪಾಠವಿದೆಯಲ್ಲವೆ? ಕನಿಷ್ಠ ಮನೆಯಂಗಳ, ತಾರಸಿಯಲ್ಲಾದರೂ ಹಸಿರು ಬಿತ್ತನೆ ಮಾಡಬಹುದು.

ಪ್ರತಿಕ್ರಿಯಿಸಿ: feedback@sudha.co.in


SANDHILIN सन्धिलिन
ಸಂಧಿಲಿನ್
ಸಂಧಿಲಿನ್ ಹಚ್ಚಿ
ನೋವಿಗೆ
ವಿದಾಯ
ಹೇಳಿ!
ಶೀಘ್ರ ಪರಿಣಾಮಕಾರಿ




- ವಿವಿಧ ತರಹದ ನೋವಿಗೆ ಶೀಘ್ರ ಪರಿಣಾಮಕಾರಿ.
- ಕಳೆದ 14 ವರ್ಷಗಳಿಂದ ಲಕ್ಷಾಂತರ ಜನರ ಪ್ರಥಮ ಆಯ್ಕೆ.
- 'ಸಂಧಿಲಿನ್' ಲಿನಿಮೆಂಟ್‌ನ್ನು ಆಯುರ್ವೇದದ ಋಷಿಮುನಿ ಪ್ರಣೀತ ಶಾಸ್ತ್ರೋಕ್ತವಾಗಿ, ಅತ್ಯಾಧುನಿಕ ತಂತ್ರಜ್ಞಾನವನ್ನು ಅಳವಡಿಸಿ ತಯಾರಿಸಲಾಗಿದೆ.
- ಚರ್ಮ ಅಥವಾ ಬಟ್ಟೆಯ ಮೇಲೆ ಯಾವುದೇ ಜಿಡ್ಡು, ಕಲೆಗಳು ಉಂಟಾಗುವುದಿಲ್ಲ.

ತಯಾರಕರು
SDM AYURVEDA PHARMACY
ISO / GMP CERTIFIED
ಶ್ರೀ ಧರ್ಮಸ್ಥಳ
ಮಂಜುನಾಥೇಶ್ವರ ಆಯುರ್ವೇದ ಫಾರ್ಮಸಿ
ಕುತ್ಪಾಡಿ – 574 118, ಉಡುಪಿ ಜಿಲ್ಲೆ, ಕರ್ನಾಟಕ
Ph.: 0820 2520852, 89709 77513
Email: sdmaph@gmail.com
ಇದು 'SDM ಆಯುರ್ವೇದ ಫಾರ್ಮಸಿ'ಯ ಉತ್ಕೃಷ್ಟ ಗುಣಮಟ್ಟದ ಉತ್ಪನ್ನ